**ದಿನಾಂಕಃ 21-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಜಿ ವಿ ಎ ವಕೀಲರಿಂದಃ**

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ, ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಿಃ 25.08.2011 ರ ಮೂಲ ದಾನ ಪತ್ರ ಹಾಜರು ಮಾಡಿದ್ದೇನೆ ಅದನ್ನು **ನಿಡಿ-1** ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಮಂಜಮ್ಮನವರು ತಮ್ಮ ಸಹಿಗಳನ್ನು ಮಾಡಿರುತ್ತಾರೆ ನಾನೂ ಸಹ ಸಹಿ ಮಾಡಿರುತ್ತೆನೆ. ಸಾಕ್ಷಿ ತನ್ನ ಸಹಿಗಳನ್ನು ಗುರುತಿಸಿದ್ದರಿಂದ ಅವುಗಳನ್ನು **ನಿಡಿ-1 (ಎ) ರಿಂದ ನಿಡಿ-1(ಇ)** ಎಂದು ಗುರುತಿಸಲಾಯಿತು. ಸದರಿ ದಾಖಲಗೆ ಸಾಕ್ಷಿದಾರರಾಗಿ ಪ್ರವೀಣ, ರಾಜೇಶ್ವರಿ ಮತ್ತು ಪೂರ್ಣಿಮ ಎನ್ನುವವರು ಸಹಿ ಮಾಡಿರುತ್ತಾರೆ. ಪತ್ರವನ್ನು ಪತ್ರಬರಹಗಾರರಾದ ಬಸವರಾಜು ರವರು ಸಿದ್ದಪಿಡಿಸಿರುತ್ತಾರೆ . ಸಾಕ್ಷಿದಾರರುಗಳು ಸಹ ಸದರಿ ದಾಖಲೆಗೆ ರುಜು ಮಾಡಿರುತ್ತಾರೆ. 24.04.2006 ರ ನೊಂದಾಯಿತ ಕ್ರಯ ಪತ್ರಗಳ ಮೂಲ ದಾಖಲೆಗಳಾಗಿದ್ದು. ಸದರಿ ಆಸ್ತಿಯಗಳನ್ನು ನನ್ನ ಸ್ವಂತ ಸಂಪಾದನೆಯಿಂದ ಖರೀದಿಸಿರುತ್ತೆನೆ. ಅವು ನನ್ನ ಸ್ವಯಾರ್ಜಿತ ಆಸ್ತಿಗಳಾಗಿದ್ದು ಅವುಗಳನ್ನು **ನಿಡಿ-2 ಮತ್ತು ನಿಡಿ-3** ಎಂದು ಗುರುತಿಸಲಾಯಿತು. ದಿಃ28.10.2006 ಹಾಗೂ 26.05.2017 ರ ನೊಂದಾಯಿತ ಕ್ರಯ ಪತ್ರಗಳ ಮೂಲ ದಾಖಲೆಗಳಾಗಿದ್ದು, ಸದರಿ ಆಸ್ತಿಯಗಳನ್ನು ನನ್ನ ಸ್ವಂತ ಸಂಪಾದನೆಯಿಂದ ಖರೀದಿಸಿರುತ್ತೆನೆ. ಅವುಗಳು ನನ್ನ ಸ್ವಯಾರ್ಜಿತ ಆಸ್ತಿಗಳಾಗಿದ್ದು ಅವುಗಳನ್ನು **ನಿಡಿ-4 ಮತ್ತು ನಿಡಿ-5** ಎಂದು ಗುರುತಿಸಲಾಯಿತು. ಇ-ಖಾತೆಗಳನ್ನು ಹಾಜರು ಮಾಡಿದ್ದು ಅದನ್ನು **ನಿಡಿ-6** ಎಂದು ಗುರುತಿಸಲಾಯಿತು. ಮಂಜಮ್ಮ ತೀರಿಕೊಂಡ ಸಂಬಂಧ ಮರಣ ಪ್ರಮಾಣ ಪತ್ರ ಹಾಜರು ಮಾಡಿದ್ದೇನೆ ಅದನ್ನು **ನಿಡಿ**-7 ಎಂದು ಗುರುತಿಸಲಾಯಿತು. ದಾವಾ ಆಸ್ತಿಗಳಿಗೆ ಸಂಬಂಧಸಿದಂತೆ ಕೈ ಬರಹದ ಪಹಣಿಗಳನ್ನು ಹಾಜರು ಮಾಡಿದ್ದೇನೆ ಅವುಗಳನ್ನು **ನಿಡಿ-8 ರಿಂದ ನಿಡಿ**-27 ಎಂದು

ಗುರುತಿಸಲಾಯಿತು. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರು ಮಾಡಿದ್ದೇನೆ ಅವುಗಳನ್ನು **ನಿಡಿ-28 ರಿಂದ ನಿಡಿ-37** ರವರೆಗೆ ಗುರುತಿಸಲಾಯಿತು. ಕಂದಾಯ ಪಾವತಿಸಿದ ರಶೀದಿಗಳನ್ನು ಹಾಜರು ಮಾಡಿದ್ದೇನೆ ಅವುಗಳನ್ನು **ನಿಡಿ-38 ರಿಂದ ನಿಡಿ-40** ಎಂದು ಗುರುತಿಸಲಾಯಿತು. ಬ್ಯಾಂಕ್ ಪಾವತಿ ಚಲನ್ ಗಳನ್ನು ಹಾಜರು ಮಾಡಿದ್ದೇನೆ ಅವುಗಳನ್ನು **ನಿಡಿ-41 ರಿಂದ ನಿಡಿ-45** ಎಂದು ಗುರುತಿಸಲಾಯಿತು. ರಚನಾ ಪಬ್ಲಿಕ್ ಶಾಲೆಯವರು ಹಾಗೂ ಗೈಡ್ ಲೈನ್ ಶಾಲೆಯವರು ನೀಡಿರುವ ದೃಡಿಕರಣಗಳನ್ನು ಹಾಜರು ಮಾಡಿದ್ದೇನೆ ಅವುಗಳನ್ನ **ನಿಡಿ-46 ಮತ್ತು ನಿಡಿ-47** ಎಂದು ಗುರುತಿಸಲಾಯಿತು. ನಾನು ಟೈಲರಿಂಗ್ ವೃತ್ತಿ ಮಾಡುತ್ತಿದ್ದ ಸಂಬಂಧ ತರಬೇತಿ ಪಡೆದಿದ್ದು ಆ ಬಗ್ಗೆ ತರಬೇತಿ ಪತ್ರ ಹಾಜರು ಮಾಡಿದ್ದೇನೆ ಅದನ್ನು **ನಿಪಿ-48** ಎಂದು ಗುರುತಿಸಲಾಯಿತು.

**ಒಟ್ಟಾಗಿ ನಿಡಿ–1 ರಿಂದ ನಿಡಿ–48 ಎಂದು ಗುರುತಿಸಲಾಯಿತು.**

**<u>ಪಾಟೀಸವಾಲುಃ ವಾದಿ ಪರ ವಕೀಲರಿಂದಃ</u>**

ವಾದಿ ಪರ ವಕೀಲರು ಹಾಜರಿಲ್ಲದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ